
# ನಿರಂತರವೂ ಅತ್ಯಂತ ಪ್ರಾಮುಖ್ಯವಾದ ಕಥೆ




ರವಿ, ರಾಣಿ! ಏನಿದು?
ಅಪ್ಪಾ, ದಯವಿಟ್ಟು ಹೇಳಿ.
ನೀವು ಒಂದು ಪ್ರಾಮುಖ್ಯವಾದ ಕಥೆಯನ್ನು ಹೇಳುತ್ತೇನೆಂದು ನಮಗೆ ಭರವಸೆ ಕೊಟ್ಟಿದ್ದು ಜ್ಞಾಪಕವಿದೆಯೇ?
ಹೌದು! ಅತೀ ಪ್ರಾಮುಖ್ಯವಾದ ಕಥೆಯು, ಅತೀಪ್ರಾಮುಖ್ಯವಾದ ಪುಸ್ತಕದಿಂದ - ಅದು ಸತ್ಯವೇದ, ದೇವರ ಪುಸ್ತಕ.
ಸತ್ಯವೇದ ಕಥೆಯೋ?
ಇದು ಸಾಧಾರಣವಾದ ಕಥೆಯೆಂದು ತಿಳಿಯಬೇಡ. ಈ ಸತ್ಯವೇದ ಕಥೆಯು ಎಲ್ಲಾ ಮನುಷ್ಯರನ್ನು ಕುರಿತ ದೇವರ ಯೋಜನೆಯಾಗಿದೆ.
ಅದು ದೇವರ ಪುಸ್ತಕವೆಂದು ನಮಗೆ ಹೇಗೆ ತಿಳಿಯುತ್ತದೆ?



ದೇವರು ಸ್ವತಃ ಪುಸ್ತಕ ಬರೆದರೇನು?
ದೇವರು 40 ವಿವಿಧ ವ್ಯಕ್ತಿಗಳನ್ನು ಉಪಯೋಗಿಸಿದನು, ರವಿ. ಅವರು ಸುಮಾರು 1,500 ವರ್ಷಗಳ ಕಾಲದಲ್ಲಿ ಇದನ್ನು ಬರೆದರು. ಇದರಲ್ಲಿ 66 ಪುಸ್ತಕಗಳಿದ್ದರೂ ಅವುಗಳ ಸಂದೇಶವು ಒಮ್ಮತದಲ್ಲಿದೆ. ದೇವರಿಂದ ಮಾತ್ರ ಈ ರೀತಿಯ ಪುಸ್ತಕವನ್ನು ಸಿದ್ಧಪಡಿಸಲು ಸಾಧ್ಯ.
ದೇವರು ಹೇಗಿರುತ್ತಾನೆ?
ದೇವರು ನಮ್ಮ ಬಗ್ಗೆ ಬಹಳ ಚಿಂತಿಸುತ್ತಾನೆ, ಮತ್ತು ನಾವು ಸಹಾಯಕ್ಕಾಗಿ ಕೂಗಿದಾಗ ಉತ್ತರಿಸುತ್ತಾನೆ. ಆತನು ಪರಿಶುದ್ಧನೂ, ಕಳಂಕವಿಲ್ಲದವನೂ ಆಗಿದ್ದಾನೆ. ನೀನು ಆತನನ್ನು ನೋಡಲು ಸಾಧ್ಯವಿಲ್ಲ ಆದರೆ ಆತನು ಎಲ್ಲವನ್ನೂ ನೋಡುತ್ತಾನೆ ಎಲ್ಲವನ್ನೂ ಬಲ್ಲವನು ಮತ್ತು ಏನು ಬೇಕಾದರೂ ಮಾಡಬಲ್ಲವನು. ನಿಮಗೆ ಅಪ್ಪ ಕಥೆ ಹೇಳುವಾಗ ಗೊತ್ತಾಗುತ್ತದೆ.
ಆದಿಯಲ್ಲಿ ದೇವರು ಭೂಮಿಯನ್ನೂ, ಅದರಲ್ಲಿ ಸಕಲವನ್ನೂ ಸೃಷ್ಟಿಸಿದನು. ಅನಂತರ ದೇವರು 'ಏದೆನ್' ಎಂಬ ಒಂದು ಉದ್ಯಾನವನವನ್ನು ಮಾಡಿದನು. ಆತನು ಅದನ್ನು ಒಂದು ಪ್ರಮುಖ ಸೃಷ್ಟಿಗಾಗಿ ನಿರ್ಮಿಸಿದನು.
ಓಹ್! ಅದು ನಾವು!

# ಸೃಷ್ಟಿ – ಆದಾಮ ಮತ್ತು ಹವ್ವ

ಸತ್ಯವೇದ – ಆದಿಕಾಂಡ: 1,2

**ದೇವರು ಹೇಳಿದನು – "ನಮ್ಮ ಸ್ವರೂಪದಲ್ಲಿ, ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ." ಮತ್ತು ಕರ್ತನಾದ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು. ಆಗ ಮನುಷ್ಯನು ಬದುಕುವ ಪ್ರಾಣಿಯಾದನು.**

"ನೆಲದ ಮಣ್ಣಿನಿಂದ?"

"ಹೌದು ರವಿ, ದೇವರು ಏನು ಬೇಕಾದರೂ ಮಾಡಲುಶಕ್ತನು!"

**ನಂತರ ಕರ್ತನಾದ ದೇವರು "ಮನುಷ್ಯನು ಒಂಟಿಯಾಗಿರುವುದು ಒಳ್ಳೇದಲ್ಲ. ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು" ಅಂದನು. ಹೀಗಿರುವಲ್ಲಿ ಕರ್ತನಾದ ದೇವರು ಆ ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಸ್ತ್ರೀಯನ್ನು ಉಂಟುಮಾಡಿದನು.**


ದೇವರು ಹವ್ವಳೆಂಬ ಈ ಸ್ತ್ರೀಯನ್ನು, ಆದಾಮನಿಗೆ ಹೆಂಡತಿಯಾಗಿ ಕೊಟ್ಟನು.

**ಉದ್ಯಾನವನದ ಮಧ್ಯಭಾಗದಲ್ಲಿ, ದೇವರು, ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರವನ್ನು ಇಟ್ಟನು. ಆದರೆ ದೇವರು ಆ ಮನುಷ್ಯನಿಗೆ "ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಧಾರಾಳವಾಗಿ ತಿನ್ನಬಹುದು. ಒಳ್ಳೇದರ, ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು. ತಿಂದ ದಿನ ಸತ್ತೇ ಹೋಗುವಿ" ಎಂದು ಎಚ್ಚರಿಕೆ ಕೊಟ್ಟನು.**

ಆದಾಮ ಮತ್ತು ಹವ್ವ ಇಬ್ಬರೂ ಬಹಳ ಸಂತೋಷಉಳ್ಳವರಾಗಿ ಆ ಉದ್ಯಾನವನದಲ್ಲಿ ವಾಸಮಾಡಿದರು. ಇವರು ದೇವರಿಗೆ ಅತಿ ಸಮೀಪದಲ್ಲೇ ಇದ್ದು ದೇವರಲ್ಲಿ ಬಹಳ ಆನಂದಿಸಿದರು. ಆದರೆ ಒಂದು ದಿನ...







# ಆದಾಮ ಮತ್ತು ಹವ್ವ ಪಾಪ ಮಾಡಿದರು

ಸತ್ಯವೇದ – ಆದಿಕಾಂಡ 3.

ದೇವರ ಶತ್ರುವಾದ ಸೈತಾನನು ಸರ್ಪದ ರೂಪವನ್ನು ಧರಿಸಿದನು. ಸೈತಾನನಿಗೆ, ಆದಾಮ ಮತ್ತು ಹವ್ವರು ದೇವರ ಸಂಗಡವಿರುವುದು ಮತ್ತು ದೇವರಿಗೆ ವಿಧೇಯರಾಗುವುದು ಇಷ್ಟವಿರಲಿಲ್ಲ.

ಆತನು ಹವ್ವಳನ್ನು ಕೇಳಿದನು –"ದೇವರು ತೋಟದಲ್ಲಿರುವ ಯಾವುದಾದರೂ ಮರದ ಹಣ್ಣನ್ನು ನೀವು ತಿನ್ನಬಾರದೆಂದು ನಿಜವಾಗಿಯೂ ಹೇಳಿದ್ದಾನೆಯೇ?"

ಅದಕ್ಕೆ ಆಕೆಯು "ತೋಟದ ಮಧ್ಯದಲ್ಲಿರುವ ಆ ಮರದ ವಿಷಯವಾಗಿ ಮಾತ್ರ – ಅದರ ಫಲವನ್ನು ತಿನ್ನಲೂ ಕೂಡದು, ಮುಟ್ಟಲೂಕೂಡದು, ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ" ಅಂದಳು.


"ನೀವು ಸಾಯುವುದಿಲ್ಲ!" – ಸರ್ಪವು ಬುಸುಗುಟ್ಟಿತು. "ನೀವು ದೇವರಂತೆಯೇ ಆಗುತ್ತೀರಿ."


ಆ ಸ್ತ್ರೀಗೆ ಅದು ಸರಿಕಂಡಿತು. ಆ ಹಣ್ಣು ನೋಡುವುದಕ್ಕೆ ತುಂಬಾ ತಾಜಾ ಹಾಗೂ ರಮ್ಯವಾಗಿತ್ತು, ಮತ್ತು ಅದನ್ನು ತಿಂದರೆ ತಾನು ಜ್ಞಾನಿಯಾಗುತ್ತೇನೆ ಅಂದುಕೊಂಡು ಆಕೆಯು ಅದನ್ನು ...


"ಬೇಡ! ಹವ್ವ, ಅದನ್ನು ತಿನ್ನಬೇಡ!"

"ಉತ್ತಮ ಸಲಹೆ ರವಿ, ಆದರೆ ಆಕೆಯು ತಿಂದಳು, ಆದಾಮನಿಗೆ ಕೊಡಲು ಆತನೂ ತಿಂದನು."

ತಕ್ಷಣವೇ ಅವರಿಗೆ ಭಯವಾಯಿತು. ದೇವರು ತೋಟಕ್ಕೆ ಬಂದಾಗ, ಅವರು ಆತನಿಂದ ಅಡಗಿಕೊಂಡರು. ದೇವರಿಗೆ ಅವಿಧೇಯರಾಗುವುದನ್ನು ಆರಿಸಿಕೊಂಡು ಅವರು ಪಾಪ ಮಾಡಿದರು. ಆದ್ದರಿಂದ ದೇವರು ಅವರನ್ನು ಏದೆನ್ ತೋಟದಿಂದ ಹೊರಗೆ ಕಳುಹಿಸಿದನು.


ದೇವರು ಅವರನ್ನು ಹೊರಗಟ್ಟಿದನೇ? ಅವರನ್ನು ದೇವರು ಮತ್ತೆಂದೂ ಪ್ರೀತಿಸಲಿಲ್ಲವೆ?
ನಾನಾಗಿದ್ದರೆ ಸೈತಾನನ ಮಾತನ್ನು ಕೇಳುತ್ತಲೇ ಇರಲಿಲ್ಲ.
ಅವರು ದೇವರನ್ನು ಮತ್ತೆ ಕಂಡರೆ?


ನೀಧಾನ! ಸ್ವಲ್ಪ ತಾಳಿ! ದೇವರು ಅನಂತರವೂ ಅವರನ್ನು ಪ್ರೀತಿಸಿದನು. ಆದರೆ ಆತನು ಪಾಪವನ್ನು ದ್ವೇಷಿಸುತ್ತಾನೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ.
ಹಾಗಾದರೆ ದೇವರು ಯಾತಕ್ಕೆ ಆ ಮರವನ್ನು ಅಲ್ಲಿ ಇಟ್ಟನು?


ದೇವರು ಆದಾಮ – ಹವ್ವರನ್ನು ಪ್ರೀತಿಸಿದನು. ಅವರಷ್ಟಕ್ಕೆ ಅವರಾಗಿಯೇ, ದೇವರನ್ನು ಪ್ರೀತಿಸಿ, ವಿಧೇಯರಾಗಲು ಆಯ್ಕೆ ಮಾಡಬೇಕೆಂದು ಆತನು ಬಯಸಿದನು. ಆದರೆ, ಅವರಾದರೋ ಅವಿಧೇಯರಾಗುವುದನ್ನೇ ಆರಿಸಿಕೊಂಡರು. ದೇವರಿಂದ ಬೇರ್ಪಡುವಿಕೆಯು ಎಷ್ಟೊಂದು ಘೋರವೆಂಬುದು ಅವರಿಗೆ ತಿಳಿದಿರಲಿಲ್ಲ.
ಮತ್ತು ಅವರು ಪಾಪವನ್ನು ಆರಿಸಿಕೊಂಡಿದ್ದರಿಂದ ಅವರ ನಂತರ ಹುಟ್ಟಿದವರೆಲ್ಲಾ, ಪಾಪಿಗಳೂ, ದೇವರಿಂದ ಬೇರ್ಪಟ್ಟವರೂ ಆಗಿ ಹುಟ್ಟಿಕೊಂಡರು.
ಅಂದರೆ, ಅವರ ನಿಮಿತ್ತವಾಗಿ, ನಾವೂ ದೇವರ ಸಂಗಡ ಇರುವುದಕ್ಕೆ ಆಗುವುದಿಲ್ಲವೇ? ಇದು ನ್ಯಾಯವಲ್ಲ !
ಅವರ ನಿಮಿತ್ತ ಮಾತ್ರವಲ್ಲ ರವಿ. ನಾವೆಲ್ಲರೂ ತಪ್ಪುಮಾಡುವುದರ ಮೂಲಕ ಪಾಪ ಮಾಡುತ್ತೇವೆ. ಆದರೆ ನಮ್ಮನ್ನು ಆತನ ಜೊತೆ ಒಂದಾಗಿಸಲು ದೇವರು ಒಂದು ಅದ್ಭುತವಾದ ಯೋಜನೆಯನ್ನು ಮಾಡಿದನು. ನಮ್ಮ ಪಾಪಕ್ಕೋಸ್ಕರ, ಒಬ್ಬ ಪಾಪರಹಿತ ವ್ಯಕ್ತಿಯು ಸಾಯುವುದೇ ಆ ಯೋಜನೆಯಾಗಿತ್ತು.
ಸೂಕ್ತ ಸಮಯದಲ್ಲಿ ದೇವರು ತನ್ನ ಆಲೋಚನೆಯನ್ನು ಕ್ರಿಯಾರೂಪಕ್ಕೆ ತಂದನು. ಒಂದು ಮಗುವಿನೊಂದಿಗೆ ಅದು ಆರಂಭವಾಯಿತು.



# ಯೇಸುವಿನ ಜನನ

ಸತ್ಯವೇದ - ಮತ್ತಾಯ-1, ಲೂಕ-2.

ದೇವರು ತನ್ನ ಕುಮಾರನನ್ನು ಮರಿಯಳಿಗೆ ಒಂದು ಮಗುವಾಗಿ ಕೊಟ್ಟನು. ಯೇಸುವನ್ನು ಸಾಕಿ ಸಲಹುವುದರಲ್ಲಿ ಮರಿಯಳಿಗೆ ಸಹಾಯವಾಗುವುದಕ್ಕೆ ದೇವರು ಯೋಸೇಫನನ್ನು ಆರಿಸಿಕೊಂಡನು. ಮಗುವು ದೇವಕುಮಾರನಾದುದರಿಂದ ಆತನು ಜನನದಲ್ಲೇ ಪಾಪರಹಿತನಾಗಿದ್ದನು.

ಕರ್ತನ ದೂತನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು "ಮರಿಯಳು ಒಬ್ಬ ಮಗನನ್ನು ಹಡೆಯುವಳು, ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು. ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು" ಎಂದು ಹೇಳಿದನು. ("ಯೇಸು"ಹೆಸರಿನ ಅರ್ಥ - ಕರ್ತನು ರಕ್ಷಿಸುತ್ತಾನೆ ಎಂದು.)



ಮಗು ಹುಟ್ಟುವುದಕ್ಕೆ ಸ್ವಲ್ಪ ಮುಂಚೆ ಯೋಸೇಫ ಮತ್ತು ಮರಿಯರು, ಬೇತ್ಲೆಹೇಮ್‌ಗೆ ಹೋಗಬೇಕಾಯಿತು.

**ಅವರು ಅಲ್ಲಿದ್ದಾಗ ಮರಿಯಳು ತನ್ನ ಮೊದಲ ಗಂಡು ಮಗುವಿಗೆ ಜನ್ಮವಿತ್ತಳು.**

ದೇವರು ತನ್ನ ಕುಮಾರನು ಹುಟ್ಟಿರುವ ವಿಷಯವಾಗಿ ಜನರಿಗೆ ತಿಳಿಸಲು ತನ್ನ ದೂತರನ್ನು ಕಳುಹಿಸಿದನು. ಜನರು, ದೇವಕುಮಾರನು ಮಗುವಾಗಿ ಹುಟ್ಟಿರುವ ಈ ಅದ್ಭುತ ಸಂಗತಿಯನ್ನು ನೋಡಲು ಬಂದರು.

"ಮಕ್ಕಳೇ, ಯೇಸು ನಿಮ್ಮಂತೆಯೇ ಬೆಳೆದು ಬಂದನು"

"ಅಪ್ಪಾ,ಯೇಸು ಶಾಲೆಗೆ ಹೋಗುತ್ತಿದ್ದನೇ? ಆಟವಾಡುತ್ತಿದ್ದನೇ?"

"ಹೌದು ರವಿ, ಅವನು ತಂದೆತಾಯಿಗಳಿಗೆ ವಿಧೇಯನಾಗಿದ್ದನು ಮತ್ತು ಅವನ ನಿಜ ತಂದೆಯಾದ ದೇವರಿಗೂ ವಿಧೇಯನಾಗಿದ್ದನು. ಅವನು ಎಂದೂ ಪಾಪ ಮಾಡಲಿಲ್ಲ."

# ಭೋದಕ ಯೇಸು

ಸತ್ಯವೇದ – ಲೂಕ 2 ; ಮತ್ತಾಯ 22 ; ಯೋಹಾನ 3

ಆತನು 12 ವರ್ಷ ವಯಸ್ಸಿನವನಿದ್ದಾಗ ಯೆರೂಸಲೇಮಿನಲ್ಲಿ ಬೋಧಕರ ಸಂಗಡವಿದ್ದನು.

**ಆತನು ಬೋಧಕರ ನಡುವೆ ಕುಳಿತುಕೊಂಡು ಅವರ ಉಪದೇಶವನ್ನು ಕೇಳುತ್ತಾ ಪ್ರಶ್ನೆ ಮಾಡುತ್ತಾ ಇದ್ದನು. ಆತನು ಆಡಿದ ಮಾತುಗಳನ್ನು ಕೇಳಿದವರೆಲ್ಲರೂ ಆತನ ಬುದ್ಧಿಗೂ, ಉತ್ತರಗಳಿಗೂ ಆಶ್ಚರ್ಯಪಟ್ಟರು.**

ಯೇಸು ಜ್ಞಾನದಲ್ಲಿಯೂ, ದೇಹಬಲದಲ್ಲಿಯೂ, ವೃದ್ಧಿಯಾಗುತ್ತಾ ಬಂದನು. ಅದಲ್ಲದೆ ದೇವರ ಮತ್ತು ಮನುಷ್ಯರ ಪ್ರೀತಿಗೆ ಪಾತ್ರನಾದನು.

30 ವರ್ಷದವನಾದಾಗ ಯೇಸು, ಬೋಧಿಸಲು ಮತ್ತು ಉಪದೇಶಿಸಲು ಆರಂಭಿಸಿದನು. ಮನುಷ್ಯರ ಆಲೋಚನೆ ಮತ್ತು ಆತನ ಕ್ರಿಯೆಗಳ ಬಗ್ಗೆ, ದೇವರು ಕಾಳಜಿವಹಿಸುತ್ತಾನೆ ಎಂಬುದಾಗಿ ಆತನು ಕಲಿಸಿದನು.


ಆತನು ಹೇಳಿದನು, **"ನಿನ್ನ ದೇವರಾಗಿರುವ ಕರ್ತನನ್ನು, ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಅದಕ್ಕೆ ಸಮಾನವಾದ ಎರಡನೆಯ ಆಜ್ಞೆಯು ಯಾವುದೆಂದರೆ ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೆ."**

ಮನುಷ್ಯನನ್ನು ಮತ್ತೆ ದೇವರ ಬಳಿಗೆ ಹಿಂತಿರುಗಿಸುವ ದೇವರ ಅದ್ಭುತವಾದ ಯೋಜನೆಯ ಬಗ್ಗೆ ಯೇಸು ತಿಳಿಸಿದನು.

ಆತನು ಹೇಳಿದನು – **"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."**

"ಅಪ್ಪಾ, ನಾನು ಯೇಸುವನ್ನು ನಂಬುತ್ತೇನೆ !"

"ಅದು ಬಹಳ ಒಳ್ಳೆಯದು ರಾಣಿ !"





# ಗುಣಪಡಿಸುವ ಯೇಸು

ಸತ್ಯವೇದ - ಮತ್ತಾಯ : 4,9

ದೇವರು ಹೇಗಿರುತ್ತಾನೆ ಎಂಬುದಾಗಿ ಜನರು ತಿಳಿಯುವಂತೆ ಯೇಸು ಸಹಾಯಮಾಡಿದನು. ರೋಗಗಳನ್ನು ವಾಸಿಮಾಡುವುದರ ಮುಖಾಂತರ ದೇವರು ಅವರನ್ನು ಪ್ರೀತಿಸುತ್ತಾನೆ ಎಂದು ತೋರಿಸಿಕೊಟ್ಟನು.

**ರೋಗಿಗಳು ಗುಣವಾಗುವುದಕ್ಕಾಗಿ ಆತನ ಬಳಿಗೆ ಬರುವುದಕ್ಕೆ ಆರಂಭಿಸಿದರು. ಅವರು ಥರಥರದ ರೋಗಗಳಿಂದ ಕಷ್ಟಪಡುವವರಾಗಿದ್ದರೂ, ದೆವ್ವ ಹಿಡಿದವರಾಗಿದ್ದರೂ, ಮೂರ್ಛಾ ರೋಗಿಗಳಾಗಿದ್ದರೂ, ಪಾರ್ಶ್ವವಾಯು ರೋಗಿಗಳಾಗಿದ್ದರೂ, ಆತನು ಅವರೆಲ್ಲರನ್ನು ಸ್ವಸ್ಥ ಮಾಡಿದನು.**

ಹೀಗೆ ಒಂದು ದಿನ ಒಬ್ಬ ಅಧಿಪತಿಯು ಬಂದು ಯೇಸುವಿಗೆ ಅಡ್ಡಬಿದ್ದನು.

**"ನನ್ನ ಮಗಳು ಈಗಲೇ ತೀರಿಹೋದಳು. ಅದಾಗ್ಯೂ ನೀನು ಬಂದು ಆಕೆಯ ಮೇಲೆ ಕೈಯಿಟ್ಟರೆ ಬದುಕುವಳು" ಎಂದು ಬೇಡಿಕೊಂಡನು.**

**ಯೇಸು ಅಲ್ಲಿಗೆ ಹೋಗಿ ಆಕೆಯ ಕೈಹಿಡಿಯಲು, ಆಕೆ ಎದ್ದು ನಿಂತಳು!**

"ವಾಹ್! ಯೇಸು ನಿಜವಾಗಿಯೂ ಸ್ವಸ್ಥಪಡಿಸಿದನೇ ಅಪ್ಪಾ?"

"ಹೌದು ರವಿ. ಆತನು ಇಂದಿಗೂ ಸ್ವಸ್ಥಪಡಿಸುವವ ನಾಗಿದ್ದಾನೆ, ಆತನಿಗೆ ಅಸಾಧ್ಯವಾದದ್ದೇನೂ ಇಲ್ಲ."







# ಅದ್ಭುತಗಳನ್ನು ಮಾಡುವ ಯೇಸು

**ಸತ್ಯವೇದ - ಮತ್ತಾಯ 12, ಯೋಹಾನ 6**

"ಯೇಸು ಅನೇಕ ಅದ್ಭುತ ಮತ್ತು ಸೂಚಕಕಾರ್ಯಗಳನ್ನು ಮಾಡಿದನು. ಆತನು ಬಿರುಗಾಳಿಯನ್ನು ಶಾಂತಪಡಿಸಿದನು. ಮತ್ತು ಸಮದ್ರದ ಮೇಲೆ ನಡೆದನು!"

"ಅದು ಖಂಡಿತವಾಗಿಯೂ ಅದ್ಭುತವಾದದ್ದು."

"ಹೌದು ರವಿ. ಮತ್ತೊಂದು ಸಮಯದಲ್ಲಿ 5,000 ಕ್ಕಿಂತಲೂ ಹೆಚ್ಚಿನ ಜನರು ಬಹುದೂರದ ಸ್ಥಳಕ್ಕೆ ಯೇಸುವನ್ನು ಹಿಂಬಾಲಿಸಿದರು. ಆಗ ಸಂಜೆಯಾಗಿದ್ದರಿಂದ ಆತನ ಶಿಷ್ಯರು ಆ ಜನರನ್ನು, ಆಹಾರ ಕೊಂಡುಕೊಳ್ಳಲು, ಊರುಗಳಿಗೆ ಹಿಂತಿರುಗಿಸುವುದಕ್ಕೆ ಪ್ರಯತ್ನಿಸಿದರು.

**ಯೇಸು ಶಿಷ್ಯರಿಗೆ "ಅವರು ಹೋಗುವುದು ಅಗತ್ಯವಿಲ್ಲ - ನೀವೇ ಅವರಿಗೆ ಊಟಕ್ಕೆ ಕೊಡಿರಿ" ಅಂದನು.**

**ಅಂದ್ರೇಯನು ಆತನಿಗೆ "ಇಲ್ಲಿರುವ ಒಬ್ಬ ಹುಡುಗನ ಬಳಿಯಲ್ಲಿ, ಐದು ಜವೆಗೋಧಿಯ ರೊಟ್ಟಿಗಳೂ, ಎರಡು ಮೀನುಗಳೂ ಇವೆ. ಆದರೆ ಇಷ್ಟು ಜನರಿಗೆ ಅವು ಯಾತಕ್ಕಾದವು?" ಅಂದನು.**

**ಯೇಸು ಆ ರೊಟ್ಟಿಗಳನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ, ಕುಳಿತುಕೊಂಡವರಿಗೆ ಹಂಚಿಕೊಟ್ಟನು. ಅದರಂತೆ ಮೀನುಗಳನ್ನೂ ಹಂಚಿಕೊಟ್ಟನು. ಎಲ್ಲರೂ ತೃಪ್ತಿಯಾಗುವಷ್ಟು ಊಟ ಮಾಡಿದರು.**

**ಅವರಿಗೆ ತೃಪ್ತಿಯಾದ ಮೇಲೆ ಯೇಸು ತನ್ನ ಶಿಷ್ಯರಿಗೆ "ಮಿಕ್ಕ ತುಂಡುಗಳನ್ನು ಕೂಡಿಸಿರಿ. ಇದರಲ್ಲಿ ಏನೂ ವ್ಯರ್ಥವಾಗಬಾರದು" ಎಂದು ಹೇಳಿದನು.**

**ಅವರು ಕೂಡಿಸಲಾಗಿ, ಆ ಐದು ಜವೆಗೋಧಿಯ ರೊಟ್ಟಿಗಳಲ್ಲಿ ಜನರು ತಿಂದು ಮಿಕ್ಕ ತುಂಡುಗಳಿಂದ ಹನ್ನೆರಡು ಬುಟ್ಟಿಗಳು ತುಂಬಿದವು.**

"ಅವರು ತಿಂದು ಉಳಿದ ಆಹಾರವು ಮೊದಲಿದ್ದ ಆಹಾರಕ್ಕಿಂತ ಹೆಚ್ಚಿನದೆ ?"

"ಹೌದು ರಾಣಿ, ದೇವರು ಅವರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತಾನೆ ಎಂಬುದಾಗಿ ಇದರ ಮೂಲಕ ಯೇಸು ಅವರಿಗೆ ಕಲಿಸಿದನು. ನಾವು ಕೇಳುವುದಾದರೆ, ನಮಗೂ ಅದೇ ರೀತಿ ಸಹಾಯ ಮಾಡುತ್ತಾನೆ."







# ಮಕ್ಕಳ ಜೊತೆ ಯೇಸು

ಸತ್ಯವೇದ - ಮತ್ತಾಯ 19, ಮಾರ್ಕ 10

ದೇವರು ಮಕ್ಕಳನ್ನು ಪ್ರೀತಿಸುತ್ತಾನೆಂದು ಯೇಸು ಜನರಿಗೆ ತೋರಿಸಿದನು. ಆತನು ಅವರನ್ನು ಗುಣಪಡಿಸಿದನು. ಅವರು ತನಗೆ ಸಹಾಯ ಮಾಡುವಂತೆ ಅವಕಾಶಕೊಟ್ಟನು (ಉದಾ:- ರೊಟ್ಟಿ ಮತ್ತು ಮೀನು ಕೊಟ್ಟ ಹುಡುಗ) ಮತ್ತು ಸತ್ತವರನ್ನು ಆತನು ಎಬ್ಬಿಸಿದನು.

ಕೆಲವರು ತಮ್ಮ ಚಿಕ್ಕ ಮಕ್ಕಳನ್ನು ಯೇಸುವಿನ ಬಳಿಗೆ ತಂದು, ಆತನು ಅವರ ಮೇಲೆ ಕೈಯಿಟ್ಟು ಪ್ರಾರ್ಥನೆ ಮಾಡಬೇಕೆಂದು ಕೇಳಲು ಶಿಷ್ಯರು ಅವರನ್ನು ಗದರಿಸಿದರು.

ಆದರೆ ಯೇಸು ಅದನ್ನು ಕಂಡು ಅವರಿಗೆ "ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ,



ಅವರಿಗೆ ಅಡ್ಡಿಮಾಡಬೇಡಿ, ಯಾವನಾದರೂ ಅವರಲ್ಲಿರುವಂಥ ನಂಬಿಕೆಯನ್ನು ಹೊಂದಿಲ್ಲವಾದರೆ, ಅವನು ದೇವರ ರಾಜ್ಯವನ್ನು ಪ್ರವೇಶಿಸುವುದೇ ಇಲ್ಲ'' ಅಂದನು. ನಂತರ ಅವರನ್ನು ಅಪ್ಪಿಕೊಂಡು ಅವರ ಮೇಲೆ ಕೈಯಿಟ್ಟು ಆಶೀರ್ವದಿಸಿದನು.

''ನನಗೂ ಯೇಸುವಿನಿಂದ ಆಶೀರ್ವಾದ ಬೇಕು''
''ನಿನಗೂ ಸಾಧ್ಯ ರವಿ. ಯೇಸು ಅಂದಿನಂತೆ ಇಂದಿಗೂ ಮಕ್ಕಳನ್ನು ಪ್ರೀತಿಸುತ್ತಾನೆ''


''ಹಾಗಿದ್ದರೂ, ಪ್ರತಿಯೊಬ್ಬರೂ ಆತನನ್ನು ಮೆಚ್ಚಿದರೆಂದು ಹೇಳಲಾಗುವುದಿಲ್ಲ. ಆತನು ಮಾಡಿದ ಕೆಲಸಗಳನ್ನು ಮತ್ತು ಬೋಧನೆಯನ್ನು ಕಂಡು ಧರ್ಮಶಾಸ್ತ್ರಿಗಳು ಕೋಪಗೊಂಡರು. ಜನರು ಆತನನ್ನು ತುಂಬಾ ಇಷ್ಟಪಟ್ಟಿದ್ದರಿಂದ ಅವರು ಹೊಟ್ಟೆಕಿಚ್ಚುಪಟ್ಟರು. ಆದ್ದರಿಂದ ಆತನನ್ನು ಹೇಗಾದರೂ ಮಾಡಿ ಸಾಯಿಸಬೇಕೆಂದು ಅವರು ಯೋಚಿಸಿದರು.''

# ಯೇಸುವಿನ ಬಂಧನ ಮತ್ತು ನ್ಯಾಯವಿಚಾರಣೆ

ಸತ್ಯವೇದ - ಲೂಕ 22 ಯೋಹಾನ 19

ಒಂದು ರಾತ್ರಿ ಯೇಸು ತೋಟದಲ್ಲಿ ಪ್ರಾರ್ಥಿಸುತ್ತಿದ್ದಾಗ ಯೆಹೂದ್ಯರ ಹಿರೀಸಭೆಯವರು ಆತನನ್ನು ಬಂಧಿಸುವುದಕ್ಕಾಗಿ, ದೊಣ್ಣೆ ಮತ್ತು ಕತ್ತಿಗಳನ್ನು ಹಿಡಿದುಕೊಂಡ ಜನರ ಗುಂಪನ್ನು ಕಳುಹಿಸಿದರು.

ಆತನ ಶಿಷ್ಯರು "ಸ್ವಾಮಿ, ನಾವು ಕತ್ತಿಯಿಂದ ಹೊಡೆಯೋಣವೇ" ಎಂದು ಕೇಳಿದರು. ಅದರಲ್ಲಿ ಒಬ್ಬನು, ಒಬ್ಬ ಆಳನ್ನು ಹೊಡೆದು ಅವನ ಬಲಗಿವಿಯನ್ನು ಕಡಿದು ಹಾಕಿದನು.





ಆದರೆ ಯೇಸು “ಇಷ್ಟಕ್ಕೇ ನಿಲ್ಲಿಸಿರಿ” ಎಂದು ಹೇಳಿ ಆ ಕಿವಿಯನ್ನು ಮುಟ್ಟಿ ಅವನಿಗೆ ವಾಸಿಮಾಡಿದನು.

“ಯೇಸು ಶತ್ರುಗಳಲ್ಲೊಬ್ಬನನ್ನು ವಾಸಿಮಾಡಿದನೋ?”

“ಹೌದು ರಾಣಿ, ಆತನು ಎಲ್ಲರನ್ನೂ ಪ್ರೀತಿಸುತ್ತಾನೆ”

ಅವರು ತಕ್ಷಣವೇ, ಯೇಸುವನ್ನು ಹಿಡಿದು ಬಂಧಿಸಿದರು. ಆತನನ್ನು ಆ ಪ್ರದೇಶದ ಅಧಿಕಾರಿಯಾದ ಪಿಲಾತನ ಬಳಿಗೆ ತೆಗೆದುಕೊಂಡುಹೋದರು. ಆತನು ಯೇಸುವನ್ನು ವಿಚಾರಣೆಗೊಳಪಡಿಸಿದನು. ಸೈನಿಕರು ಯೇಸುವನ್ನು ಹೊಡೆದರು, ತಲೆಯ ಮೇಲೆ ಮುಳ್ಳುಗಳನ್ನಿಟ್ಟು ಹಾಸ್ಯಮಾಡಿದರು. ಆಮೇಲೆ ಪಿಲಾತನು ಜನರ ಸಂಗಡ ಮಾತನಾಡಿದನು.

“ನಾನು ಆತನನ್ನು ನಿಮ್ಮ ಬಳಿಗೆ ಕರೆತರುತ್ತೇನೆ. ಆದರೆ ತಿಳಿದುಕೊಳ್ಳಿರಿ - ನಾನು ಆತನಲ್ಲಿ ಯಾವುದೇ ರೀತಿಯ ತಪ್ಪನ್ನು ಕಾಣುತ್ತಿಲ್ಲ.”

ಅವರು “ಅವನನ್ನು ಕೊಲ್ಲಿಸು, ಶಿಲುಬೆಗೆ ಹಾಕಿಸು” ಎಂದು ಕೂಗಿದರು. ನಂತರ ಪಿಲಾತನು ಯೇಸುವನ್ನು ಶಿಲುಬೆಗೆ ಹಾಕಿಸುವುದಕ್ಕೆ ಅವರ ವಶಕ್ಕೆ ಕೊಟ್ಟನು.

“ಆದರೆ ಆತನು ತಪ್ಪೇನೂ ಮಾಡಿರಲಿಲ್ಲವಲ್ಲ. ಇದು ನ್ಯಾಯವಲ್ಲ!”

“ಹೌದು ರವಿ. ಆದರೆ ನೆನಪಿಡು -ದೇವರಿಗೆ ಒಂದು ಉದ್ದೇಶವಿತ್ತು”

# ಯೇಸು ಶಿಲುಬೆಯಲ್ಲಿ ಪ್ರಾಣಬಿಟ್ಟದ್ದು

ಸತ್ಯವೇದ - ಲೂಕ 23

"ಅವರು ಯೇಸುವನ್ನು ಶಿಲುಬೆಗೆ ಹಾಕಿದರು"

ಆಗ ಯೇಸು,"ತಂದೆಯೇ ಆವರನ್ನು ಕ್ಷಮಿಸು. ತಾವು ಏನು ಮಾಡುತ್ತೇವೆಂಬುದನ್ನು ಅವರು ಅರಿಯರು" ಅಂದನು.

ಆತನ ಸಂಗಡ ಇಬ್ಬರು ದುಷ್ಕರ್ಮಿಗಳನ್ನು ಕೂಡಾ ಶಿಲುಬೆಗೆ ಹಾಕಿದ್ದರು. ಅವರಲ್ಲಿ ಒಬ್ಬನು ಅತನನ್ನು ದೂಷಿಸಿ, "ಬರಬೇಕಾದ ಮೆಸ್ಸೀಯನು ನೀನೇ ತಾನೆ?" (ಮೆಸ್ಸೀಯ ಎಂಬುದು ದೇವಕುಮಾರನ ಇನ್ನೊಂದು ಹೆಸರು.) "ಹಾಗಿದ್ದರೆ ನಿನ್ನನ್ನು ರಕ್ಷಿಸಿಕೋ, ನಮ್ಮನ್ನೂ ರಕ್ಷಿಸು", ಅಂದನು.

ಆದರೆ ದುಷ್ಕರ್ಮಿಗಳಲ್ಲಿ ಮತ್ತೊಬ್ಬನು ಅವನನ್ನು ಗದರಿಸಿ ಹೇಳಿದನು, "ನೀನು ಸಾಯುವಾಗಲಾದರೂ ದೇವರಿಗೆ ಹೆದರುವುದಿಲ್ಲವೋ? ನಾವಂತೂ ನಮ್ಮ ದುಷ್ಕರ್ಮಗಳ ಪ್ರತಿಫಲವಾಗಿ ಸಾಯುತ್ತಿದ್ದೇವೆ. ಈತನಾದರೋ ಯಾವ ತಪ್ಪನ್ನೂ ಮಾಡಲಿಲ್ಲ." ಬಳಿಕ ಯೇಸುವಿನೊಡನೆ, "ಯೇಸುವೇ, ನೀನು ನಿನ್ನ ರಾಜ್ಯವನ್ನು ಹೊಂದುವಾಗ ನನ್ನನ್ನೂ ನೆನಸಿಕೋ" ಅಂದನು.

ಅದಕ್ಕೆ ಯೇಸು ಉತ್ತರವಿತ್ತನು. "ನಿನಗೆ ನಿಜ ಹೇಳುತ್ತೇನೆ, ಈ ದಿನವೇ ನೀನು ನನ್ನ ಸಂಗಡ ಸ್ವರ್ಗಲೋಕದಲ್ಲಿ ಇರುವಿ."


"ಆತನು ಸತ್ತಮೇಲೆ ಯೇಸುವಿನ ಬಳಿಗೆ ಹೋದನೇ ?"


"ಹೌದು ರಾಣಿ"

"ನಂತರ ಯೇಸು ತಂದೆಯಾದ ದೇವರಿಗೆ ಮಹಾಧ್ವನಿಯಿಂದ ಕೂಗಿ, ಪ್ರಾಣವನ್ನು ಬಿಟ್ಟನು."

"ಯೇಸು ದೇವರ ಯೋಜನೆಯಲ್ಲಿ ಸರಿಯಾದ ವ್ಯಕ್ತಿಯಾಗಿದ್ದ ತಾನೇ?"

"ಹೌದು ರವಿ. ದೇವರು ತನ್ನ ಪರಿಶುದ್ಧನಾದ ಮಗನನ್ನೇ ಕಳುಹಿಸಿಕೊಟ್ಟನು. ನಮ್ಮ ಪಾಪಕ್ಕೆ ನಾವು ಹೊಂದಬೇಕಾದ ಶಿಕ್ಷೆಯನ್ನು ಅನುಭವಿಸುವುದಕ್ಕೋಸ್ಕರ ಆತ ಸತ್ತನು."





# ಇಂದಿಗೂ ಜೀವಿಸುವ ಯೇಸು

**ಸತ್ಯವೇದ – ಮತ್ತಾಯ 28, ಲೂಕ 24**

ಯೇಸುವಿನ ಸ್ನೇಹಿತರು ಆತನ ಶರೀರವನ್ನು ಸಮಾಧಿಯಲ್ಲಿಟ್ಟರು. ವಾರದ ಮೊದಲನೆಯ ದಿವಸದಲ್ಲಿ ಇನ್ನೂ ಮೊಬ್ಬಿರುವಾಗ ಇಬ್ಬರು ಸ್ತ್ರೀಯರು ಸಮಾಧಿಯ ಬಳಿಗೆ ಹೋದರು.

ಒಮ್ಮೆಲೆ ಮಹಾಭೂಕಂಪವಾಯಿತು. ಕರ್ತನ ಒಬ್ಬ ದೂತನು ಆಕಾಶದಿಂದ ಇಳಿದುಬಂದು ಸಮಾಧಿಗೆ ಮುಚ್ಚಿದ ಕಲ್ಲನ್ನು ಉರುಳಿಸಿದನು.

"ಹೆದರಬೇಡಿರಿ", ದೂತನು ಹೇಳಿದನು. "ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ನೀವು ಹುಡುಕುತ್ತೀರೆಂದು ಬಲ್ಲೆನು. ಆತನು ಇಲ್ಲಿ ಇಲ್ಲ. ತಾನು ಹೇಳಿದಂತೆ ಸತ್ತವರಿಂದ ಎದ್ದಿದ್ದಾನೆ. ನೀವು ಬೇಗ ಹೋಗಿ ಆತನ ಶಿಷ್ಯರಿಗೆ ತಿಳಿಸಿರಿ."



“ಅದು ಅತ್ಯುತ್ತಮ ವಿಷಯ!”

“ಹೌದು ರವಿ. ಆತನು ನಮ್ಮ ಪಾಪಕ್ಕೆ ಪ್ರಾಯಶ್ಚಿತ್ತ ಅರ್ಪಿಸಿದ ನಂತರ ದೇವರು ಆತನನ್ನು ಸತ್ತವರೊಳಗಿನಿಂದ ಎಬ್ಬಿಸಿದನು. ಅದೇ ದೇವರ ನಿತ್ಯವಾದ ಯೋಜನೆಯಾಗಿತ್ತು.”

ನಂತರ, ಶಿಷ್ಯರು ಈ ವಿಷಯವಾಗಿ ಮಾತನಾಡುತ್ತಿದ್ದಾಗ ಯೇಸುವು ಸ್ವತಃ ಅವರ ನಡುವೆ ನಿಂತು “ನಿಮಗೆ ಮನಶ್ಶಾಂತಿಯಾಗಲಿ” ಎಂದನು. ಆದರೆ ಅವರು ತಾವು ಕಂಡದ್ದು ಭೂತವೆಂದು ಭಾವಿಸಿ ಭಯಭ್ರಾಂತರಾದರು.

ಆತನು ಅವರಿಗೆ “ಯಾಕೆ ಭಯಪಡುತ್ತಿದ್ದೀರಿ? ನನ್ನ ಕೈ ಕಾಲುಗಳನ್ನು ನೋಡಿರಿ. ನಾನೇ ಅಲ್ಲವೇ? ನನ್ನನ್ನು ಮುಟ್ಟಿನೋಡಿ. ನಾನು ಭೂತವಲ್ಲವೆಂದು ಖಚಿತಪಟ್ಟುಕೊಳ್ಳಿರಿ” ಅಂದನು.





# ಯೇಸು ಇಂದು ಎಲ್ಲಿದ್ದಾನೆ ?

ಸತ್ಯವೇದ – ಯೋಹಾನ 16, ಅಪೋಸ್ತಲರ ಕೃತ್ಯ 1

"ಯೇಸು ಅನೇಕ ವಾರಗಳವರೆಗೆ ಶಿಷ್ಯರ ಸಂಗಡವಿದ್ದನು"

"ಅವರಿಗೆ ಬಹಳ ಸಂತೋಷವಾಗಿರಬೇಕು !"

"ಸರಿ, ಆದರೆ ಯೇಸು ಈಗ ಎಲ್ಲಿದ್ದಾನೆ?"

"ಉತ್ತಮ ಪ್ರಶ್ನೆ ರಾಣಿ"

ಯೇಸು ಹೇಳಿದನು – "ನಾನು ಹೋಗುವುದು ನಿಮಗೆ ಹಿತಕರವಾಗಿದೆ. ಹೇಗೆಂದರೆ ನಾನು ಹೋಗದಿದ್ದರೆ, ಪವಿತ್ರಾತ್ಮನು ನಿಮ್ಮ ಬಳಿಗೆ ಬರುವುದಿಲ್ಲ. ನಾನು ಹೋದರೆ ಆತನನ್ನು ನಿಮ್ಮ




**ಬಳಿಗೆ ಕಳುಹಿಸಿ ಕೊಡುತ್ತೇನೆ".**

ಶಿಷ್ಯರ ಸಂಗಡ ಯೇಸು ಮಾತನಾಡುವುದನ್ನು ಮುಗಿಸಿದಾಗ, ಅವರು ನೋಡುತ್ತಾ ಇದ್ದ ಹಾಗೆ, ಆತನು ಆಕಾಶಕ್ಕೆ ಏರಿ ಮೋಡದಲ್ಲಿ ಮರೆಯಾದನು. ಇಬ್ಬರು ದೂತರು ಅವರಿಗೆ ಹೇಳಿದರು, **"ನಿಮ್ಮ ಬಳಿಯಿಂದ ಸ್ವರ್ಗಲೋಕಕ್ಕೆ ಒಯ್ಯಲ್ಪಟ್ಟಿರುವ ಈ ಯೇಸು, ಯಾವ ರೀತಿ ಹೋಗುವುದನ್ನು ನೀವು ಕಂಡಿರೋ, ಅದೇ ರೀತಿ ತಿರುಗಿ ಬರುವನು."**

ಒಂದು ದಿವಸ ಯೇಸು, ಎಲ್ಲಾ ದೇವರ ಮಕ್ಕಳಿಗಾಗಿ ಹಿಂತಿರುಗಿ ಬರುತ್ತಾನೆ - ಅಂದರೆ, ಯಾರೆಲ್ಲಾ, ಯೇಸು ತಮ್ಮ ಪಾಪಗಳ ನಿಮಿತ್ತ ಸತ್ತಿದ್ದಾನೆ ಎಂದು ನಂಬಿ ಪಾಪದ ಕ್ಷಮಾಪಣೆಯನ್ನು ಹೊಂದಿಕೊಂಡಿದ್ದಾರೋ ಅವರಿಗಾಗಿ. ನಾವು ಆತನ ಸಂಗಡ ನಿರಂತರವಾಗಿ ಇರಲಿದ್ದೇವೆ. ದೇವರ ಪ್ರೀತಿಯಿಂದ ನಮ್ಮನ್ನು ತಿರುಗಿ ಬೇರ್ಪಡಿಸಲು ಯಾವುದರಿಂದಲೂ ಸಾಧ್ಯವಾಗಲಾರದು.



"ನಾನು ದೇವರ ಮಗುವಾಗಲು ಬಯಸುತ್ತೇನೆ. ಆಗ ನಾನು ಆತನ ಸಂಗಡ ಇರಬಹುದು".



"ಭೇಷ್ ರವಿ ! ಇದು ನಿಜವಾಗಿಯೂ ಅತ್ಯುತ್ತಮವಾದ ತೀರ್ಮಾನ ! ನಮ್ಮ ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸಿದೆಯೆಂದು ಸತ್ಯವೇದವು ನಮಗೆ ತಿಳಿಸುತ್ತದೆ. ಹಾಗೂ, "ನೀನು ಯೇಸುವನ್ನು ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು. ಹೃದಯದಿಂದ ನಂಬುವುದರ ಮೂಲಕ ನೀತಿಯು ದೊರಕುತ್ತದೆ. ಬಾಯಿಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ." ಎಂಬುದಾಗಿಯೂ ಅದು ತಿಳಿಸುತ್ತದೆ (ರೋಮಪುರದವರಿಗೆ 10:9-10)
ನಾನು ಸಿದ್ಧನಿದ್ದೇನೆ ! ನಾನು ನಿಜವಾಗಿಯೂ ಯೇಸುವನ್ನು ನಂಬುತ್ತೇನೆ!"
ಹಾಗಿದ್ದರೆ ದೇವರ ಬಳಿಯಲ್ಲಿ ಹೇಳೋಣ ರವಿ. ಆತನು ಸದಾ ಆಲಿಸುತ್ತಾನೆ. ನಮ್ಮ ಪ್ರಾರ್ಥನೆಯನ್ನು ಲಾಲಿಸಿ ಉತ್ತರವನ್ನು ಕೊಡುತ್ತಾನೆ. ನನ್ನ ಜೊತೆಯಲ್ಲಿ ಈ ಪ್ರಾರ್ಥನೆಯನ್ನು ಮಾಡು.

ಪ್ರೀತಿಯ ದೇವರೇ, ನಾನೊಬ್ಬ ಪಾಪಿಯೆಂದು ನನಗೆ ಗೊತ್ತು. ನಾನು ತಪ್ಪು ಆಯ್ಕೆಗಳನ್ನು ಹಾಗೂ ಕೆಟ್ಟ ಕೆಲಸಗಳನ್ನು ಮಾಡಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸು. ನಿನ್ನ ಕುಮಾರನಾದ ಯೇಸು, ನನ್ನ ಪಾಪದ ನಿಮಿತ್ತ ಸತ್ತನೆಂದೂ, ಮತ್ತು ನೀನು ಆತನನ್ನು ಸತ್ತವರೊಳಗಿಂದ ಎಬ್ಬಿಸಿದೆಯೆಂದೂ ನಾನು ನಂಬುತ್ತೇನೆ. ಯೇಸುವು ನನ್ನ ಒಡೆಯನಾಗಬೇಕೆಂದು ನಾನು ಬಯಸುತ್ತೇನೆ. ನನ್ನನ್ನು ಪ್ರೀತಿಸಿ, ನಿನ್ನ ಮಗನಾಗಿ ಮಾಡಿಕೊಂಡದ್ದಕ್ಕಾಗಿ ನಿನಗೆ ಧನ್ಯವಾದಗಳು. ಇನ್ನು ಮುಂದೆ ನಿನಗೆ ವಿಧೇಯನಾಗುವುದಕ್ಕೆ ನಾನು ಶಕ್ತನಾಗುವಂತೆ, ನಿನ್ನ ಪವಿತ್ರಾತ್ಮನಿಂದ ನನ್ನನ್ನು ತುಂಬಿಸು. ಆಮೆನ್.






ವಾಹ್! ನಾನು ಈಗ ದೇವರ ಮಗು. ಅಲ್ಲವೇ ?
ಖಂಡಿತವಾಗಿಯೂ !


ಇನ್ನು ಮುಂದೆ ದೇವರ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳುವುದಕ್ಕಾಗಿ, ಆತನ ಸಂಗಡ ಪ್ರಾರ್ಥನೆಯ ಮೂಲಕ ಮಾತನಾಡಿ, ಆತನ ಪುಸ್ತಕವಾದ ಸತ್ಯವೇದದಲ್ಲಿ ಆತನ ಬಗ್ಗೆ ಓದಬೇಕು. ದೇವರು ಸತ್ಯವೇದದ ಮೂಲಕ ನಿನ್ನಲ್ಲಿ ಮಾತನಾಡಿ, ನೀನು ಮಾಡಬೇಕಾದ ಅವಶ್ಯಕ ಸಂಗತಿಗಳನ್ನು ನಿನಗೆ ತಿಳಿಸುತ್ತಾನೆ.
ಅವುಗಳು ಯಾವುವು ಅಪ್ಪಾ ?
ದೇವರನ್ನು ಪ್ರೀತಿಸುವುದು, ಜನರಿಗೆ ಯೇಸುವಿನ ಬಗ್ಗೆ ತಿಳಿಸುವುದು ಮತ್ತು ಅವರಿಗೆ ದೇವರ ಪ್ರೀತಿ ಮತ್ತು ಶಕ್ತಿಯನ್ನು ತೋರಿಸಿಕೊಡುವುದು.
ಯೇಸು ತನ್ನ ಶಿಷ್ಯರಿಗೆ ಹೇಳಿದನು – "ನೀವು ಹೊರಟು ಹೋಗಿ, ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ .... ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ವಿಧೇಯರಾಗಲು ಅವರಿಗೆ ಕಲಿಸಿರಿ. ನೋಡಿರಿ, ನಾನು ನಿರಂತರವೂ ನಿಮ್ಮ ಸಂಗಡ ಇರುತ್ತೇನೆ." ಮತ್ತಾಯ *28:19-20.*


ಯೇಸು ಸ್ವರ್ಗಲೋಕಕ್ಕೆ ಹೋದ ನಂತರ ನಮಗೋಸ್ಕರ ಪವಿತ್ರಾತ್ಮನನ್ನು ಕಳುಹಿಸಿದನು. ಆತನು ನಿನಗೆ ಮಾರ್ಗದರ್ಶನ ಮಾಡಿ ಉಪದೇಶಿಸುವನು. ಇತರರಲ್ಲಿ ದೇವರ ವಿಷಯವಾಗಿ ಹೇಳುವುದಕ್ಕೆ ನಿನಗೆ ಪ್ರತ್ಯೇಕ ಶಕ್ತಿಯನ್ನು ಕೊಡುವನು.
ನಾನು ನನ್ನ ಸ್ನೇಹಿತರಿಗೂ ಹೇಳಬೇಕು!
ಆಹಾ! ಅತ್ಯುತ್ತಮವಾದ ಘಟನೆಯು ಈಗ ತಾನೇ ಸಂಭವಿಸಿತು. ಅದು ನಿಮಗೆ ಕೂಡಾ ಸಂಭವಿಸಬಹುದು. ನೀವು ಕೂಡಾ ನಂಬಿ, ನಾನು ಮಾಡಿದ ತೀರ್ಮಾನವನ್ನು ಮಾಡಬಹುದು. ದೇವರಲ್ಲಿ ಪ್ರಾರ್ಥಿಸಿದರೆ ಆತನು ಆಲಿಸುತ್ತಾನೆ. ಆತನು ನಿಮ್ಮನ್ನು ಪ್ರೀತಿಸುತ್ತಾನೆ. ನಿಮ್ಮ ಪಾಪಗಳನ್ನು ಕ್ಷಮಿಸಿ ತನ್ನ ಪ್ರಿಯ ಮಕ್ಕಳನ್ನಾಗಿ ಮಾರ್ಪಡಿಸುತ್ತಾನೆ.

ದೇವರ ಪುಸ್ತಕವನ್ನು ಓದಿನೋಡಿರಿ.
ನಿಮ್ಮ ಜೀವಿತದ ಅತೀ ಶ್ರೇಷ್ಠವಾದ
ಸಾಹಸವನ್ನು ಆರಂಭಿಸಿ !



ಹೆಚ್ಚಿನ ವಿವರಗಳಿಗಾಗಿ ನಮ್ಮ ಸ್ಥಳೀಯ ವಿಳಾಸಕ್ಕೆ ಬರೆಯಿರಿ :

KANN 504

Copyright © 1996 World Serve Ministries. All rights reserved
First published in Kannada, 1996. Printed in India, 1998

*Kannada*